# ನುಡಿಗಳ ಅಳಿವು–ಕೆಲವು ತಾತ್ತ್ವಿಕ ವಿಚಾರಗಳು


## ದೇವನೂರು ನಂದೀಶ*



DOI: https://doi.org/10.5281/zenodo.21793487



**ABSTRACT**

ಕಳೆದೆರಡು ವರ್ಷಗಳ ಹಿಂದಿನಿಂದಲೂ ಭಾಷೆಯ ಕುರಿತಾಗಿ ಕೆಲ ವಿಚಾರಗಳು ಪ್ರಶ್ನೆಯ ರೂಪದಲ್ಲಿ ಕಂಡುಬಂದದ್ದರಿಂದಲೂ ಮತ್ತು ಇದಕ್ಕೆ ಉತ್ತರವನ್ನು ಕಂಡುಕೊಳ್ಳುವ ನೆಪದಲ್ಲಿ ನಡೆಸಿದ ಚಿಂತನೆಯಾಗಿಯೂ ಇಲ್ಲಿನ ಕೆಲವು ಟಿಪ್ಪಣಿ ರೂಪದ ಬರೆವಣಿಗೆಯು ಬಂದಿದೆ. ಇದು ಈಗಾಗಲೆ ಪ್ರಸ್ತುತ ಲೇಖಕನಿಗೆ ಅಭಿಜಾತ ಸಾಹಿತ್ಯ ಪರಂಪರೆಯನ್ನು ಒಳಗೊಂಡ ಕನ್ನಡದಂತಹ ಪುಟ್ಟ ಭಾಷೆಯೊಂದರಲ್ಲಿನ ಪಾಠ–ಪಠ್ಯಗಳ ಓದುಗಳಲ್ಲಿ ಅರಿವಿಗೆ ಬಂದ ಸಂಗತಿ. ಹಾಗಾಗಿ ದಿನನಿತ್ಯದ ಸಂವಹನ–ಸಂಪರ್ಕದಲ್ಲಿ ಈ ಭಾಷೆಯೊಂದಿಗೆ ವ್ಯವಹರಿಸುವಲ್ಲಿ ಮತ್ತು ಅದರ ಪರಿಣಾಮವಾಗಿ ಭಾಷೆಯ ಬಗೆಗಿನ ಚಿಂತನೆಯು ಇಲ್ಲಿ ಕಂಡುಬಂದಿರುವುದು. ಹಾಗೆ ಮಂಡಿಸಿರುವ ಇಲ್ಲಿಯ ಚಿಂತನೆಯ ಒಳಹಂದರವನ್ನು ಪ್ರಸ್ತುತ ಬರಹವು ಸಾದರಪಡಿಸುತ್ತದೆಂಬ ಬಲವಾದ ನಂಬಿಕೆಯು ಇಲ್ಲಿಯದು. ಹಾಗಾಗಿ ಇಲ್ಲಿನ ಚರ್ಚೆಯ ಹಿಂಬದಿಯಲ್ಲಿ ಇವು ಕಾಣಿಸಿಕೊಂಡಿವೆ. ಜೊತೆಗೆ ಭಾಷೆಯನ್ನು ಕುರಿತಂತೆ ಇಲ್ಲಿನ ತಾತ್ತ್ವಿಕತೆಯು ಅದಕ್ಕೆ ಅನ್ವಯವಾಗುವುದು ಮಾತ್ರವಲ್ಲದೆ ಹಾಗೆ ಮಾನವ ಜಗತ್ತಿನಲ್ಲಿರುವ ಇನ್ನಿತರ ಹಲವು ಪುಟ್ಟ ಭಾಷೆಗಳನ್ನೂ ಗಮನದಲ್ಲಿರಿಸಿಕೊಂಡು ಇಲ್ಲಿನ ತಾತ್ತ್ವಿಕತೆಯನ್ನು ರೂಪಣೆಗೊಳಿಸಲಾಗಿದೆ. ಅದರಂತೆ ಭಾಷೆಗಳ ಅಳಿವಿನ ಬಗೆಗೆ ಇರುವ ತಿಳಿವಳಿಕೆಯನ್ನು ಕುರಿತ ಚಿಂತನೆಯು ಇಲ್ಲಿರುವುದು. ಹೀಗಾಗಿ ನುಡಿಗಳ ಅಳಿವಿನ ಬಗೆಗೆ ಇರುವ ಸಾಮಾನ್ಯ ತಿಳಿವಿನೊಂದಿಗೆ ಮಂಡಿಸಲಾಗಿರುವ ಇಲ್ಲಿನ ಕೆಲ ತಾತ್ತ್ವಿಕ ವಿಚಾರಗಳನ್ನು ಈ ಮುಂದಿನ ಚರ್ಚೆಯಲ್ಲಿ ನೋಡಬಹುದು.



**KEYWORDS:** ಭಾಷೆ, ಸಂವಹನ ಕ್ರಿಯೆ, ಮನುಷ್ಯ, ಹುಟ್ಟು–ಸಾವು, ಜನಾಂಗ, ಚರಿತ್ರೆ.



* **ದೇವನೂರು ನಂದೀಶ,** ಯು.ಜಿ.ಸಿ.–ಸೀನಿಯರ್ ರಿಸರ್ಚ್ ಫೆಲೋ, ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಕಲಬುರಗಿ, ಕರ್ನಾಟಕ.

**ಭಾಷೆ ಎಂದರೇನು?**

ಭಾಷೆ ಒಂದು ಸಂವಹನ ಕ್ರಿಯೆ. ಅದರಲ್ಲೂ ಬಹುಮುಖ್ಯವಾಗಿ ಮನುಷ್ಯನಾದವನಿಗೆ ಭಾಷೆ ಎನ್ನುವುದು ಅತ್ಯಾವಶ್ಯವಾದುದು. ಮಾನವನನ್ನು ಹೊರತುಪಡಿಸಿದಂತೆ ಉಳಿದ ಪ್ರಾಣಿಗಳಿಗೆ ಭಾಷೆ ಅತ್ಯಮೂಲ್ಯವಲ್ಲ ಎಂಬುದು ಈ ಮಾತಿನ ತರ್ಕವಲ್ಲ. ಭಾಷೆ ಎನ್ನುವುದು ಈ ಲೋಕದ ಪ್ರತಿ ಜೀವಿಗೂ ಅಗತ್ಯ ಮತ್ತು ಅನಿವಾರ್ಯವಾಗಿರುವ ಬಗೆಗೆ ಕೊಂಚ ಯೋಚಿಸಬೇಕಿರುವುದು ಈ ಸಂದರ್ಭದ ತುರ್ತು ಕೂಡ ಆಗಿದೆ. ಹಾಗಾಗಿ ಪ್ರತಿ ಜೀವಿಯ ಹುಟ್ಟಿನಿಂದ ಸಾವಿನ ತನಕ ಬೇಕಿರುವ ಮುಖ್ಯ ಸಲಕರಣೆಗಳಲ್ಲಿ ಭಾಷೆಯೂ ಒಂದಾಗಿರುವುದು. ಅದರಲ್ಲೂ ಮನುಷ್ಯನಾದವನಿಗಂತು ಇದರ ಅಗತ್ಯವು ಅವನ ಹುಟ್ಟು ಸಾವುಗಳ ನಡುವಿನ ಅವಧಿಯಲ್ಲಿ ಅತ್ಯಗತ್ಯವಾಗಿ ಇದ್ದೇ ಇರುವುದು. ಆ ಕಾರಣದಿಂದಲೆ ಅವನು ಈ ನಡುವೆ ಜೀವಿಸಬೇಕಾದರೂ ಭಾಷೆ ಬೇಕು; ಬಾಳಿ ಬದುಕನ್ನು ಸವೆಸುವುದಕ್ಕೂ ಬದುಕಿ ಬಾಳನ್ನು ಉದ್ಧಾರ ಮಾಡುವುದಕ್ಕೂ ಆತನಿಗೆ ಭಾಷೆಯೆಂಬುದು ಪ್ರಮಾಣು ಎಂದು ಹೇಳಲಾಗಿರುವುದು.

**ಹಾಗಾದರೆ ಭಾಷೆ ಎಂತಹದು? ಯಾವ ರೂಪದ್ದು?**

ಭಾಷೆಯಿಲ್ಲದಿದ್ದರೆ ಮನುಷ್ಯನು ಜೀವಿಸುವುದೇ ದುಸ್ತರ ಎಂದು ಮೇಲಿಂದ ಮೇಲೆ ಹಾಗೆ ಅಭಿವ್ಯಕ್ತಿಗೊಳ್ಳುವುದುಂಟು. ಯಾಕೆಂದರೆ ಅವನ ಬಾಳಿನುದ್ದಕ್ಕೂ ಜೀವನದ ಪ್ರತಿ ಹಂತ ಹಂತದಲ್ಲೂ ಆತನಿಗೆ ಇದರ ಅಗತ್ಯವು ಅಷ್ಟರಮಟ್ಟಿಗೆ ಇರುವ ಕಾರಣದಿಂದಾಗಿ. ಹಾಗೆ ಅವನು ತನ್ನ ದೈನಂದಿನ ಸಮೂಹ ಜೀವನದಲ್ಲಿ ನಿದ್ರೆಯಿಂದ ಕಣ್ಣುತೆರೆದ ಕ್ಷಣದಿಂದಿಡಿದು ಮತ್ತೆ ಕಣ್ಣುಮುಚ್ಚಿ ಮಲಗುವ ತನಕ ದಿನನಿತ್ಯದ ವ್ಯವಹಾರದಲ್ಲಿ ಅವನಿಗೆ ಭಾಷೆ ಎನ್ನುವುದು ಸಂವಹನದ ಭಾಗವಾಗಿ ಅಷ್ಟೇ ಅತ್ಯಗತ್ಯ ಮತ್ತು ಅನಿವಾರ್ಯವಾಗಿರುವುದು.

ಈ ಹಿನ್ನೆಲೆಯಲ್ಲಿ ಮೊದಲನೆಯದಾಗಿ ಮಾನವನ ಬದುಕಿಗೆ ಸಂಬಂಧಿಸಿದ ಹಾಗೆ ಭಾಷೆಯೆನ್ನುವುದು ಅದೊಂದು ಸಂವಹನದ ಉದ್ಧೇಶಕ್ಕಾಗಿ ನಡೆಸುವ ಪ್ರಕ್ರಿಯೆಯಾಗಿ ನಮ್ಮ ನಮ್ಮ ವ್ಯಾಖ್ಯಾನಗಳಲ್ಲಿ ಈಗಾಗಲೆ ಅಲ್ಲಲ್ಲಿ ಬಂದಿರುವುದುಂಟು. ಸಂವಹನವನ್ನು ನಡೆಸುವುದಾದರೂ ಏತಕ್ಕೆ? ಇದಕ್ಕೆ ಉತ್ತರವಾಗಿ ಈ ರೀತಿಯಾಗಿ ಹೇಳಲಾಗುವುದು. ಸಂವಹನವನ್ನು ನಡೆಸುವುದರ ಉದ್ಧೇಶವು ಮಾನವನ ದಿನನಿತ್ಯದ ಅತ್ಯಾವಶ್ಯಗಳನ್ನು ಕಂಡುಕೊಳ್ಳಲು ಮತ್ತು ನಿರ್ದೇಶನ ನೀಡಲು. ಹೀಗೆ ಪ್ರಾರಂಭವಾಗುತ್ತದೆ ಮನುಷ್ಯನ ಸಂವಹನ ಪ್ರಕ್ರಿಯೆ. ಇದರಲ್ಲಿ ಭಾಷೆಯು ಅಡಗಿರುತ್ತದೆ. ಹಾಗಾಗಿ ಭಾಷೆಯಿಲ್ಲದೆ ಸಂವಹನವು ಅಸಾಧ್ಯವೆಂದು ಹೇಳುವುದು ಒಂದು.

ಇದರ ಹೊರತಾಗಿಯೂ ಬೇರೊಂದು ನೆಲೆಯಲ್ಲಿ ಭಾಷೆಯ ಕುರಿತು ವಿಚಾರ ಮಾಡುವಲ್ಲಿ[1] ಮೂಕ ಸಂಭಾಷಣೆಯೂ ಒಂದು ಆದೇಶ, ಸೂಚನೆ, ನಿರ್ದೇಶನಗಳಿಂದ ಕೂಡಿದ ಅಭಿವ್ಯಕ್ತಿಯನ್ನು ಒಳಗೊಂಡಿರುತ್ತದೆಂದು ಹೇಳಲು ಮುಂದಾಗುವುದು ಈ

ಹಿನ್ನೆಲೆಯಿಂದಲೆ. ಅದು ಸನ್ನೆ, ಸೂಚನೆ, ಆದೇಶ, ನಿರ್ದೇಶನ ಮತ್ತಿತರ ಮಾರ್ಗಗಳಾಗಿರಬಹುದು. ಹೀಗೆ ಪ್ರಾಥಮಿಕವಾಗಿ ಮಾನವ ಜೀವಿಗಳ ನಡುವೆ ಸಂವಹನ ನಡೆಸಲು ಮೂಲಭೂತವಾಗಿ ಭಾಷೆಯೆನ್ನುವುದು ಅಷ್ಟೇ ಅತ್ಯಾವಶ್ಯವಾಗಿರುವುದು. ಆದರೂ ಭಾಷೆಯ ಪ್ರಮುಖವಾದ ಎರಡು ಬಗೆಗಳನ್ನು ಗಮನಕ್ಕೆ ತಂದುಕೊಳ್ಳಬೇಕಾದ ಅನಿವಾರ್ಯತೆಯು ಇಲ್ಲಿದೆ. ಆ ಎರಡು ಬಗೆಗಳನ್ನು ಈ ಮುಂದಿನಂತೆ ಪರಿಶೀಲಿಸಿ ನೋಡೋಣ.

**ಸಾಮಾನ್ಯ ಭಾಷೆ ಮತ್ತು ಸಾಹಿತ್ಯದ ಭಾಷೆ:**

ಸಾಮಾನ್ಯ ಭಾಷೆಗೂ ಸಾಹಿತ್ಯದ ಭಾಷೆಗೂ ಅಷ್ಟೇನೂ ಗುರುತಿಸುವ ಮಟ್ಟಿಗಿನ ಅಂತರವಿಲ್ಲದಿದ್ದರೂ ಭಾಷೆಯು ಪ್ರಮುಖವಾಗಿ ಈ ಎರಡು ತೆರನಾಗಿ ಇರುವುದನ್ನು ಸಾಧಾರಣವಾಗಿ ಗುರುತಿಸಬಹುದು. ಸಾಮಾನ್ಯ ಭಾಷೆಯನ್ನೆ ಬಳಸಿ ಸಾಹಿತ್ಯವನ್ನು ಕಟ್ಟುವ ಬಗೆ ಒಂದಾದರೆ ಸಾಹಿತ್ಯದ ಭಾಷೆಯನ್ನೆ ಸಾಮಾನ್ಯವೆಂಬಂತೆ ಮಾತಿನ ಕ್ರಮದಲ್ಲಿ ಹರಿಯಬಿಡುವುದು ಇನ್ನೊಂದು ಬಗೆಯಾಗಿದೆ. ಹಾಗಾದರೆ ಸಾಮಾನ್ಯವೆನ್ನುವ ಈ ಬಾಯ್ಮಾತಿನ ಭಾಷೆ ಮತ್ತು ಸಾಹಿತ್ಯದ ಭಾಷೆ ಎನ್ನುವವು ಏನು? ಎಂಬ ಗೊಂದಲವೂ ಇಲ್ಲಿ ಎದುರಾಗುವುದುಂಟು. ಅದನ್ನಿಲ್ಲಿ ಸ್ವಲ್ಪ ವಿಚಾರ ಮಾಡುವ.

**ಸಾಮಾನ್ಯ ಭಾಷೆ:** ಸಾಮಾನ್ಯ ಭಾಷೆಯು ಸರಳವಾದುದು ಮತ್ತು ಅಷ್ಟೆ ಸ್ಪಷ್ಟವಾದುದು ಕೂಡ. ಇದು ಕೇವಲ ಸಂವಹನದ ಉದ್ದೇಶಗಳಿಗನುಸಾರವಾಗಿ ದಿನನಿತ್ಯದ ಬದುಕಿನ ಕ್ರಮದೊಡನೆ ನಡೆಸಲು ರೂಢಿಸಿಕೊಂಡಿರುವ ಮತ್ತು ಕನಿಷ್ಟ ಇಬ್ಬರು ವ್ಯಕ್ತಿಗಳ ನಡುವೆ ಸಂಪರ್ಕವನ್ನು ಕಲ್ಪಿಸಲು ಬೇಕಿರುವ ಹಾಗು ಸರಳ ಮಾಧ್ಯಮದಲ್ಲಿ ವ್ಯವಹರಿಸಲು ಇರುವ ಭಾಷೆ.[2]

**ಸಾಹಿತ್ಯದ ಭಾಷೆ:** ಸಾಮಾನ್ಯ ಭಾಷೆಗೆ ಹೋಲಿಸಿದರೆ ಸಾಹಿತ್ಯದ ಭಾಷೆಯು[3] ಸ್ವಲ್ಪ ಕಠಿಣವೆನ್ನಬಹುದು.[4] ಇದನ್ನು ಬರೆಹದ ಮಾಧ್ಯಮವಾಗಿ ರೂಢಿಸಿಕೊಂಡಿರುವ ಸಲುವಾಗಿ ಹಾಗೆ ಹೇಳಬೇಕಾಗಿದೆಯಷ್ಟೇ.

ಆದರೂ ಸಾಹಿತ್ಯದ ಭಾಷೆಯಿರುವುದು ಕೂಡ ಸಂವಹನದ ಭಾಗವಾಗಿಯೆ ಎಂಬುದನ್ನಿಲ್ಲಿ ಮರೆಯಬಾರದು. ಸಾಹಿತ್ಯದ ಭಾಷೆಯೂ ಕೂಡ ಸಂವಹನದ ಭಾಗವಾಗಿಯೆ ಬರುವ ಕಾರಣ ಹೀಗೆ ಸಂವಹನವಾಗದ ಸಾಹಿತ್ಯವು ಒಂದು ಬಗೆಯ ದೃಷ್ಟಿಕೋನದಲ್ಲಿ ಅದು ಸಾಹಿತ್ಯದ ಭಾಷೆಯೆ ಅಲ್ಲ ಎಂದೆನಿಸಿಕೊಳ್ಳುವುದು ಇದೆ. ಹಾಗಾಗಿ ಸಾಹಿತ್ಯದ ಭಾಷೆಯೆನ್ನುವುದು ಇಲ್ಲವೆ ಇಲ್ಲ ಎಂದು ಹೇಳಿಬಿಡಬಹುದಾದರೂ ಇದೆಯೆನ್ನುವುದಕ್ಕೆ ಸಾಕಷ್ಟು ಪುರಾವೆಗಳು ಇರುವುದರಿಂದಲೂ ಇದನ್ನು ಹಾಗೆ ಹೇಳಲು ಬಾರದು. ಹೀಗಾಗಿ ಸಾಹಿತ್ಯದ ಭಾಷೆಯಲ್ಲೂ 'ಸಂವಹನ'ದ ಆವಶ್ಯವು ಇದೆಯೆನ್ನುವುದು ಇಲ್ಲಿಗೆ ಮನದಟ್ಟಾಗದೆ ಇರದು.

**ಹಾಗಾದರೆ ಸಂವಹನದ ಭಾಷೆಯಾದರೂ ಎಂತಹದು?:**

ಕನಿಷ್ಟ ಇಬ್ಬರು ವ್ಯಕ್ತಿಗಳಲ್ಲಿ ಅಥವ ಒಂದು ಘಟನೆ ಮತ್ತು ಒಬ್ಬ ವ್ಯಕ್ತಿಯೊಡನೆ ಸಂವಹನದ ಭಾಷೆಯು ಏರ್ಪಡುವುದು. ಇಬ್ಬರು ವ್ಯಕ್ತಿಗಳ ಮೂಲಕ ಸಂವಹನಗೊಳ್ಳುವುದು ಬಾಯ್ಮಾತಿನ ಭಾಷೆಯಾದರೆ ಒಂದು ಘಟನೆ, ಸನ್ನಿವೇಶ, ಸಂಗತಿ, ಸಂದರ್ಭ ಇತ್ಯಾದಿಗಳ ಜೊತೆ ಒಬ್ಬ ವ್ಯಕ್ತಿಯು ಬರೆಹದ ಮಾಧ್ಯಮದ ಮೂಲಕ ಸಂವಹನಿಸಲು ಶುರುವಾದಾಗ ಅದು ಸಾಹಿತ್ಯದ ಭಾಷೆಯಾಗಿ ಮಾರ್ಪಾಡಾಗುವುದು. ಅಲ್ಲದೆ ಅದು ಆಡುನುಡಿಯ ಜಾಯಮಾನದ ಕ್ರಮದಂತೆಯೇ ಕಂಡರೂ ಇನ್ನೊಂದು ಬಗೆಯಲ್ಲಿ ವಿಶಿಷ್ಟ ತೆರನ ಅಭಿವ್ಯಕ್ತಿಯ ರೂಪವೊಂದರಲ್ಲಿ ಅದು ಕಾಣಿಸಿಕೊಳ್ಳುವ ಬಗೆಯೂ ಇಲ್ಲಿರುವುದು. ಹಾಗಾಗಿ ಸಂವಹನದ ದೃಷ್ಟಿಯಿಂದ ಆಡುನುಡಿ ಮತ್ತು ಬರೆಹದ ನುಡಿಯು ಕೊಂಚ ಭಿನ್ನವಾಗಿ ಕಂಡುಬಂದಿದೆ ಎನಿಸಿಕೊಳ್ಳುವುದು ಈ ಕಾರಣದಿಂದಲೆ.

**ಹಾಗಾದರೆ ಮನುಷ್ಯನ ಜೀವನದಲ್ಲಿ ಭಾಷೆಯ ಬಳಕೆಯು ಯಾಕೆ ಆವಶ್ಯ? ಮತ್ತು ಅತ್ಯಮೂಲ್ಯ?**

ಮನುಷ್ಯ ಜೀವನದಲ್ಲಿ ತಾನು ಬದುಕಲಿಕ್ಕಾಗಿ ನಿತ್ಯಜೀವನದಲ್ಲಿ ವ್ಯವಹರಿಸಲಿಕ್ಕಾಗಿ ಭಾಷೆಯು ಅವನಿಗೆ ಅತ್ಯಮೂಲ್ಯವಾದ ಸಲಕರಣೆಯಾಗಿ ಬಂದಿರುವುದು. ಹಾಗಾಗಿ ಭಾಷೆಯ ಬಳಕೆ, ನಿರ್ವಹಣೆಗಳನ್ನು ಆತನು ತಿಳಿದಂದಿನಿಂದಲೂ ಇದನ್ನು ಜ್ಯೋತಿ, ಬೆಳಕು, ಜ್ಞಾನದ ಮೂಲ ಆಗರ ಎಂದೆಲ್ಲ ವಿಚಾರ ಮಾಡಿದಂದಿನಿಂದಲೂ ಆತನು ಇದರಿಂದ ಇನ್ನಷ್ಟು ಮಾರ್ಗ, ಪಥ, ಧ್ಯೇಯಗಳನ್ನು ಇನ್ನಷ್ಟರಮಟ್ಟಿಗೆ ಕಂಡುಕೊಂಡು ಮುನ್ನಡೆಯುತ್ತಲೆ ಬಂದಿರುವುದನ್ನು ಚರಿತ್ರೆಯ ಪೂರ್ವದಿಂದಲೂ ಅರಿಯಲು ಸಾಧ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಭಾಷೆಯನ್ನು ಆತ ತನ್ನ ದೈನಂದಿನ ಜೀವನದ ನಿತ್ಯೋಪ ಚಟುವಟಿಕೆಗಳಲ್ಲಿ ಹೇಗೆಲ್ಲ ಮತ್ತು ಯಾಕೆಲ್ಲ ಇದನ್ನು ಬಳಸಲು ಶುರುಮಾಡಿದ? ಎಂಬ ಪ್ರಶ್ನೆಯನ್ನು ಈ ಮಾರ್ಗವಾಗಿಯೇ ಕೇಳಿಕೊಂಡಿದ್ದೇ ಆದಲ್ಲಿ ಬಹುಶಃ ಇದಕ್ಕೆ ಉತ್ತರ ಹುಡುಕುವುದು ಮತ್ತು ಉತ್ತರಿಸುವುದು ಕಷ್ಟಸಾಧ್ಯವಾದ ಮಾತೆಂದು ಹೇಳುವುದು ಒಂದು. ಅದರಂತೆ ನಿತ್ಯದ ಉಪಯೋಗಕ್ಕಾಗಿಯೂ ಅಂತೆಯೇ ಲೋಕದ ಕಲ್ಯಾಣಕ್ಕಾಗಿಯೂ ಭಾಷೆಯ ಅಸ್ತಿತ್ವವು ಇಂದು ಲೋಕಾರೂಢಿಯಾಗಿ ನಿತ್ಯಬದುಕಿನಲ್ಲಿ ನಿಂತಿದೆಯೆಂದು ಹೇಳುವುದು ಇನ್ನೊಂದು. ಅಂತೆಯೆ ಇದು ಲೋಕದಲ್ಲಿ ಅತ್ಯಗತ್ಯವಾಗಿ ಬಂದೊದಗಿರುವ ಸಂಪನ್ಮೂಲವೂ ಮಾತ್ರವಲ್ಲದೆ ಅದೊಂದು ಸಂಪತ್ತು ಕೂಡ ಆಗಿರುವುದು.

**ಭಾಷೆಗಳು ಮತ್ತು ಭಾಷಾಚಿಂತನೆ:**

ಭಾಷೆಗಳು ಮತ್ತು ಭಾಷಾಚಿಂತನೆಗಾಗಿ ನಡೆಸುವ ಎಲ್ಲ ಪ್ರಯತ್ನಗಳು ಆಯಾ ಭಾಷೆಗಳ ಅಸ್ತಿತ್ವವನ್ನು ಕಂಡುಕೊಳ್ಳುವ ಮಾರ್ಗವೇ ಆಗಿದೆ. ಹಾಗಾಗಿ ಆಯಾ ಭಾಷೆಗಳು ಎಷ್ಟರಮಟ್ಟಿಗೆ ತಮ್ಮ ತಮ್ಮ ಭಾಷಾಜಗತ್ತಿನಲ್ಲಿ ಯಾವ ಯಾವ ಕ್ರಮ,

ಬಗೆಗಳಲ್ಲಿ, ನೆಲೆಗಳಲ್ಲಿ ಆಯಾಮಗಳಲ್ಲಿ ಮತ್ತು ಸಾಧ್ಯತೆಗಳಲ್ಲಿ ಸ್ವತಂತ್ರವಾದ ಚಿಂತನೆಯನ್ನು ನಡೆಸುತ್ತವೋ ಅಷ್ಟರಮಟ್ಟಿಗೆ ಆಯಾ ಭಾಷೆಗಳು ತಮ್ಮ ಭಾಷಾಪ್ರಪಂಚವನ್ನು ಸಶಕ್ತವಾಗಿ ಕಟ್ಟಿ ಮುನ್ನಡೆಸುವಲ್ಲಿ ಮತ್ತು ಅವು ವಿಶ್ವಸ್ಥ ವ್ಯವಸ್ಥೆಯಲ್ಲಿ ತನ್ನದೇ ಆದ ಗೌರವದ ಸ್ಥಾನಗಳನ್ನು ಅಂತೆಯೇ ಅಧಿಕಾರದ ಸ್ವಾಯತ್ತತೆಯನ್ನು ತಮ್ಮ ತಮ್ಮಲ್ಲಿ ಅನಿಯಂತ್ರಿತವಾಗಿ ಹೊಂದಿರುತ್ತವೆ ಮತ್ತು ಹೊಂದಬಲ್ಲವು ಕೂಡ.

ಈ ನಿಟ್ಟಿನಲ್ಲಿ ಯಾವೊಂದು ಭಾಷೆಯು ತನ್ನ ಗಡಿಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಎಷ್ಟರಮಟ್ಟಿಗೆ ಅದು ಸಶಕ್ತವಾಗಿ ತನ್ನ ಚಿಂತನೆಯ ಹಾದಿಯನ್ನು ತುಳಿಯುತ್ತದೋ ಅಷ್ಟೇಮಟ್ಟಿಗೆ ತನ್ನ ಸುತ್ತಲಿನ ಪರಿಸರವನ್ನು ಸಶಕ್ತ ಕ್ರಮದಲ್ಲಿ ಅದು ರೂಪಿಸಬಲ್ಲದ್ದೂ ಆಗಿದೆ. ಹಾಗೆಯೇ ಅಷ್ಟೇ ಘನತರವಾದ ಶ್ರಮವು ಯಾವೊಂದು ಭಾಷೆಯಲ್ಲಿ ಬೌದ್ಧಿಕ ಹಾಗು ಭೌತ ನೆಲೆಯಲ್ಲಿ ಯಾವ ಕುಂದು ಕೊರತೆಗಳೂ ಮುಂದೆಂದೂ ಕಾಣಿಸಿಕೊಳ್ಳದ ರೀತಿಯಲ್ಲಿ ಮುನ್ನಡೆಯಲು ಸಹಾಯಕವಾಗುವಂತೆ ಕಟ್ಟಬಲ್ಲ ಶಕ್ತಿ, ಸಾಮರ್ಥ್ಯಗಳು ಭಾಷೆ ಮತ್ತು ಅವುಗಳನ್ನು ಅನುಸರಿಸಿದ ಭಾಷಾಚಿಂತನೆಗೆ ಇದೆ.

ಹಾಗೆ ಅಂತಹ ಸಶಕ್ತವಾದ ಹಾದಿಯನ್ನು ರೂಪಿಸಿ ತನ್ನ ಭಾಷಾವಲಯವನ್ನು ಕಟ್ಟಬಲ್ಲ ಯಾವೊಂದು ಭಾಷೆಯು ತನ್ನ ಅಸ್ತಿತ್ವವನ್ನು ಪಡೆದಿದ್ದೇ ಆದಲ್ಲಿ ಅಂತಹ ಭಾಷೆಯು ಮತ್ತಷ್ಟು ಬಗೆಯಲ್ಲಿ ರೂಪುಗೊಳ್ಳಬಲ್ಲ ಸಾಮರ್ಥ್ಯವನ್ನೂ ಹೊಂದಿರಬಲ್ಲದ್ದೂ ಆಗಿರುವುದು. ಇದು ಭಾಷೆಯ ಬೆಳವಣಿಗೆಯ ಕಡೆಗೆ ಹೋಗುವ ಭಾಷೆಯ ಗತಿಯ ವಿಚಾರವಾಯಿತು. ಆದರೆ ಅಂತಹ ಸಶಕ್ತವಲ್ಲದ ಯಾವೊಂದು ಭಾಷೆಯು ಈ ಮಾರ್ಗಕ್ಕೆ ತದ್ವಿರುದ್ಧವಾಗಿ ಸಾಗುವ ಬಗೆಯು ಆ ತೆರನ ಆಶಾದಾಯಕ ಸಂಗತಿಗಳನ್ನು ಅಷ್ಟರಮಟ್ಟಿಗೆ ಹೊಂದಿರಲು ಅಸಾಧ್ಯವಾದ ಮಾತೇ ಆಗಿದೆ. ಹಾಗಾಗಿ ಆ ಭಾಷೆಯ ಬೆಳೆವಣಿಗೆಯ ಮಾತಂತಿರಲಿ ಬದಲಿಗೆ ಆ ಭಾಷೆಯ ಉಳಿವಿನ ಪ್ರಶ್ನೆಯೇ ಅಲ್ಲಿಗೆ ಮುಂದಾಗಿ ತೋರುವುದು. ಅದರಂತೆ ಆ ನುಡಿಗೆ ಬಂದೊದಗುವ ಸಾವಿನ ವಿಚಾರವಾಗಿ ಇನ್ನಷ್ಟು ವಿಚಾರಗಳು ಮತ್ತಷ್ಟು ತೆರನಾಗಿ ಮುನ್ನೆಲೆಗೆ ಬರುವುದು ಅಸಹಜವಾದ ಸನ್ನಾಹವೇನಲ್ಲ. ಹೀಗಾಗಿ ಅಂತಹ ಸನ್ನಾಹಕ್ಕೆ ಬಂದೊದಗಿರುವ ನುಡಿಗಳ ಅಥವ ಅಂತಹ ನುಡಿಯೊಂದರ ಅಳಿವಿನ ವಿಚಾರವಾಗಿ ಮುಂದಿನ ಸಂಗತಿಗಳ ಮುಖೇನ ಈ ಕುರಿತಾಗಿ ಇನ್ನಷ್ಟು ಚರ್ಚಿಸೋಣ.

**ಭಾಷೆ ಸಾಯುವುದೆಂದರೆ...**

ಭಾಷೆ ಸಾಯುವುದೆಂದರೆ ಅದನ್ನಾಡುವವರೂ ಸತ್ತಂತೆಯೇ. ಅದನ್ನಾಡುವವರು ಸತ್ತಂತೆ ಅದೂ ಸಾಯುತ್ತದೆ ಎಂಬುದನ್ನು ಒಂದರ್ಥದಲ್ಲಿ ಹೇಳಬಹುದಾದರೂ ಬಳಸಿದ ಭಾಷೆಯನ್ನು ನಿತ್ಯಬಳಕೆಯಲ್ಲಿ ತಾರದೆಯೂ ಇದ್ದ ಪಕ್ಷದಲ್ಲೂ ಭಾಷೆಗೆ ಇನ್ನೊಂದರ್ಥದಲ್ಲಿ ಅಂತಹದೇ ಆದ ಗತಿಯು ಬಂದೊದಗುವುದು.

**ಭಾಷೆ ಬಳಸಿದವರು ಮತ್ತು ಬಳಸಿದವರ ಭಾಷೆಯು ಇಲ್ಲವಾಗುವುದೆಂದರೆ?**

ಭಾಷೆ ಬಳಸಿದವರು ಇಲ್ಲವಾಗುವುದು ಒಂದು ಬಗೆಯದಾದರೆ ಹಾಗೆ ಬಳಸಿದವರ ಭಾಷೆಯೂ ಇಲ್ಲವಾಗುವುದು ಇನ್ನೊಂದು ಬಗೆಯದ್ದು. ಅದರಂತೆ ಅದನ್ನು ಬಳಸುವವರೂ ಕೂಡ ಪ್ರಸ್ತುತದಲ್ಲಿ ಇಲ್ಲದಿರುವುದೂ ಮತ್ತೊಂದು ಬಗೆ. ಭಾಷೆ ಬಳಸಿದವರು ಇರುವುದರೊಂದಿಗೆ ಆ ಭಾಷೆಯೂ ಇರುವುದು ಅದರ ಹಿಂದಿನಿಂದಲೂ ಮತ್ತು ಪ್ರಸ್ತುತದಲ್ಲಿ ನಿಂತು ನೋಡಬೇಕಾದದ್ದು ಬೇರೊಂದು ನೆಲೆಯದ್ದು. ಆದರೆ ಆ ಭಾಷೆಯನ್ನು ಬಳಸುವವರು ಮಾತ್ರ ಇದ್ದರೂ ಆ ಭಾಷೆಯನ್ನು ಬಳಸದೇ ಇರುವುದು ಮತ್ತೊಂದು ನೆಲೆಯ ಇನ್ನೊಂದು ಕ್ರಮವಾಗಿದೆ. ಅಂತೆಯೇ ಅಲ್ಲಿ ಆ ಭಾಷೆಯ ಬಳಕೆಯೇ ಇಲ್ಲದಿರುವುದೂ ಇನ್ನೊಂದು ವಿಚಾರ. ಹೀಗಾಗಿ ಭಾಷೆಯ ಬಳಕೆಯು ಎಲ್ಲಿ ಕೈತಪ್ಪಿಹೋಗುವುದೋ ಅಲ್ಲಿಗೆ ಆ ಭಾಷೆಯು ನಿರ್ನಾಮವಾದಂತೆಯೇ ಸರಿ ಎನ್ನಬೇಕಾಗಿ ಬಂದಿರುವುದು ಈ ಸಂದರ್ಭವೊಂದರಲ್ಲಿಯೇ.

ಹಾಗೆ ಆ ಭಾಷೆಯನ್ನು ಬಳಸುವವರು ಆ ಸಮೂಹದಲ್ಲಿ ಹೆಚ್ಚು ಹೆಚ್ಚಾಗಿ ಇಲ್ಲದ ಕಾರಣವೊಂದು ಇಲ್ಲಿ ಮುನ್ನೆಲೆಗೆ ಬರುವುದು ಒಂದು ಸಂಗತಿಯಾದರೆ ಮತ್ತೊಂದು ಆ ಭಾಷೆಯನ್ನಾಡುವ ಜನಾಂಗವನ್ನು ಆ ಭಾಷೆಯ ಮೂಲಕ ಬೌದ್ಧಿಕ ನೆಲೆಗಟ್ಟಿನಲ್ಲಿ ಸಶಕ್ತರನ್ನಾಗಿ ಮಾಡದ ಹೊರತಾಗಿಯೂ ಆ ಭಾಷೆಯ ಸಾವಿನೊಂದಿಗೆ ಆ ಜನಾಂಗವೊಂದರ ಸಾವೂ ಕಟ್ಟಿಟ್ಟ ಬುತ್ತಿಯೇ ಎನ್ನುವಂತೆ ಹೇಳುವುದು ಇದೆ. ಆ ಕಾರಣದಿಂದಲೆ ಆ ಜನಾಂಗವೊಂದರ ಸಾವಿನೊಂದಿಗೆ ಆ ಭಾಷೆಯ ಸಾವೂ ಸಂಭವಿಸುವುದು ಎಂದು ಹೇಳಲಾಗುವುದು. ಅಂದರೆ ಆ ಭಾಷೆಯು ಜ್ಞಾನದ ಭಾಷೆಯಾಗದ ಹೊರತಾಗಿ ಆ ಭಾಷೆಗೆ ಮತ್ತು ಅದನ್ನಾಡುವ ಜನಾಂಗಕ್ಕೆ ಅಂತಿಮವಾಗಿ ಸಾವೇ ಕಟ್ಟಿಟ್ಟ ಬುತ್ತಿ ಎಂದು ಹೇಳಲಾಗುವ ಮತ್ತೊಂದು ಬಗೆಯ ಚಿಂತನಾ ಕ್ರಮವೂ ಇಲ್ಲಿರುವುದು. ಅದರಂತೆ ಆ ಜನಾಂಗವು ಇಲ್ಲವಾಗುವಂತೆಯೇ ಆ ಜನಾಂಗದ ಭಾಷೆಯೂ ಇಲ್ಲವಾಗುವುದು ಎಂದು ಹೇಳುವುದು ಇನ್ನೊಂದು ತೆರನ ಅಭಿಪ್ರಾಯ.

ಆದರೆ ಇಲ್ಲಿ ಗಮನಿಸಬೇಕಾದ ವಿಸಂಗತಿಯೂ ಏನೆಂದರೆ ಭಾಷೆ ಸಾಯುವುದೆಂದರೆ ಏನು? ಎಂದು. ಮತ್ತು ಯಾಕೆಂಬುದನ್ನೂ ಇಲ್ಲಿ ಕೊಂಚ ಪರಿಕಿಸಿ ನೋಡಬೇಕಿರುವುದು. ಅದರಂತೆ ಈ ಮುಂದಿನ ಅಂಶಗಳನ್ನು ಇಲ್ಲಿ ಗಮನಕ್ಕೆ ತಂದುಕೊಳ್ಳಬೇಕಿರುವುದು.

**ಹಾಗೆ ಭಾಷೆಯೊಂದು ನಿರ್ನಾಮವಾಗಲಿಕ್ಕೆ ಕಾರಣವಾದರೂ ಏನು?**

1. ಆ ಭಾಷೆಯನ್ನು ಬಳಸುವವರು ಇಲ್ಲವಾಗುವುದು ಮತ್ತು ಅವರೂ ಇಲ್ಲವಾದಂತೆ ಆ ಭಾಷೆಯೂ ಇಲ್ಲವಾಗುವುದು.
2. ಆ ಭಾಷೆಯನ್ನು ಬಳಸುವವರು ಮುಂದೆ ಬಳಸುವವರಿಗೆ ಅದನ್ನು ತಿಳಿಸದೇ ಇಲ್ಲವಾಗುವುದು.

3. ಮುಂದೆ ಬಳಸುವವರಿಗೆ ತಿಳಿಸಿಕೊಟ್ಟರೂ ಆ ಮುಂದಿನವರು ಅದನ್ನು ಬಳಸದೇ ಇರುವುದು.

4. ಹಾಗೆ ಆ ಭಾಷೆಯನ್ನು ಆ ಮುಂದಿನವರೂ ಬಳಸದೇ ಆ ಮೂಲಕವೇ ಅವರೂ ಇಲ್ಲವಾಗುವುದು. ಅದರಂತೆ ಆ ಭಾಷೆಯೂ ನಿರ್ನಾಮವಾಗುವುದು.

ಹಾಗಾದರೆ ಹೀಗಾಗಲಿಕ್ಕೆ ಕಾರಣವಾದರೂ ಏನಿರಬಹುದು? ಎನ್ನುವುದಕ್ಕೆ ಉತ್ತರವಾಗಿ ಮನುಷ್ಯನ ಮಾನಸಿಕ ಸ್ಥಿತಿ-ಗತಿಗಳೇ ಇದಕ್ಕೆ ಕಾರಣವೆನ್ನುವುದು ಒಂದು. ಹೊರತಾಗಿ ಇದಕ್ಕೆ ಹೆಚ್ಚಿನದೇನನ್ನೂ ಹೇಳಲಾಗದು ಎನ್ನುವುದು ಇನ್ನೊಂದು. ಇದನ್ನು ತಪ್ಪಿಸುವುದಾದರೂ ಎಂತು? ಎನ್ನುವುದಕ್ಕೆ ಅವರು ಬದಲೀ ಮಾರ್ಗವನ್ನು ಕಂಡುಕೊಂಡಿರಬಹುದು ಎಂದು ಹೇಳುವುದು ಮತ್ತೊಂದು. ಹಾಗಾಗಿ ಈ ನಿಟ್ಟಿನಲ್ಲಿ ಇನ್ನಷ್ಟು ವಿಚಾರ ಮಾಡಬೇಕಿರುವುದು ಈ ಮುಂದಿನ ದಾರಿಯಾಗಿದೆ. ಅದರಂತೆ ಈ ಮುಂದಿನ ವಿಚಾರ ಸರಣಿಯನ್ನು ಗಮನಿಸಬೇಕಿರುವುದು.

ಒಂದು ದೃಷ್ಟಾಂತವನ್ನು ಉದಾಹರಣೆಯಾಗಿ ಇಲ್ಲಿ ಕೊಡಬೇಕು. ಅದೇನೆಂದರೆ ಆಡುನುಡಿಯನ್ನಷ್ಟೇ ತನ್ನ ನುಡಿಯಾಗಿರಿಸಿಕೊಂಡ ಜನಾಂಗವೊಂದು ಅಸ್ತಿತ್ವದಲ್ಲಿದ್ದು ಮತ್ತು ಆ ಜನಾಂಗವು ಹೀಗೆ ಜೀವಿಸುತ್ತಿರಲು ದಿನದಿಂದ ದಿನಕ್ಕೆ ಆ ನುಡಿಯನ್ನಾಡುವ ಜನಾಂಗದ ಸಂಖ್ಯೆಯು ಕ್ರಮೇಣ ಕ್ಷೀಣಿಸುತ್ತ ಬಂದದ್ದು ಮತ್ತು ಹಾಗೆ ಕರಗುತ್ತ ಬಂದಂತೆಲ್ಲ ಕೊನೆಗೆ ಆ ನುಡಿಯನ್ನಾಡುವ ಜನಾಂಗದ ಇಬ್ಬರೇ ಇಬ್ಬರು ವ್ಯಕ್ತಿಗಳು ಮಾತ್ರವೇ ಕೊನೆಗೆ ಉಳಿದದ್ದು ಚರಿತ್ರೆ ಮಾತ್ರವಲ್ಲ ಹಾಗೆ ಉಳಿದಿದ್ದ ಇಬ್ಬರೂ ಪರಸ್ಪರ ಸ್ನೇಹ, ಸಹಕಾರಗಳಿಂದ ದಿನನಿತ್ಯದ ವ್ಯವಹಾರದಲ್ಲಿ ಮುಂದಾಗಿ ವ್ಯವಹರಿಸದೇ ಉಳಿದದ್ದು[5] ಆ ಭಾಷೆಗೆ ಬಂದೊದಗಿದ ದುಸ್ಥಿತಿ. ಈ ಒಂದು ಸಂಗತಿಯಿಂದ ತಿಳಿದುಬರುವ ಸಂಗತಿಯೆಂದರೆ ಆ ವ್ಯಕ್ತಿಗಳಿಬ್ಬರೂ ಬದುಕಿದ್ದರೂ ಆ ಭಾಷೆಯು ಅಲ್ಲಿಗೆ ಭೌತವಾಗಿ ಇಲ್ಲವಾಗಿರುವುದು ಮತ್ತು ಆ ಭಾಷೆಯೊಂದಕ್ಕೆ ಬಂದೊದಗಿದ ವಸ್ತುಸ್ಥಿತಿಯ ವಿಲಕ್ಷಣವೂ ಇದಾಗಿದೆ.[6]

ಆದರೆ ಆ ಮುಂದಿನ ಹಾದಿಯಲ್ಲಿ ಅವರ ತಿಳಿವಳಿಕೆಯ ಭಾಗವಾಗಿ ಮತ್ತೊಂದು ಜನಸಮೂಹದ ಸಂಪರ್ಕ-ಸಂವಹನಗಳನ್ನು ಸಾಧಿಸುವ ಸಲುವಾಗಿಯಾದರೂ ಅವರಿಗೆ ಮತ್ತೊಂದು ಭಾಷೆಯ ಬಳಕೆಯ ನೆರವು ಇಲ್ಲವೆ ತನ್ನದೇ ಆದ ಭಾಷೆಯಲ್ಲಿನ ಕಸುವು ಮತ್ತಷ್ಟರ ಮಟ್ಟಿಗೆ ಬೇಕೆ ಬೇಕೆಂಬುದನ್ನು ಇಲ್ಲಿಗೆ ಕಡೆಗಣಿಸುವಂತಿಲ್ಲ. ಅದಕ್ಕಾಗಿ ಅವರು ತಮ್ಮ ತಿಳಿವಳಿಕೆಯ ಭಾಗವಾಗಿ ತಾವು ಕಂಡುಕೊಂಡ ಅರಿವಿನೊಂದಿಗೆ ಸಾಧನೆಯ ರೂಪವಾಗಿ ಭಾಷೆಯನ್ನು ರೂಪುಗೊಳಿಸಿದ ಬಗೆ ಮತ್ತು ಆ ಭಾಷೆಯ ಮುಖೇನವಾಗಿ ಸಂವಹನ-ಸಂಪರ್ಕಗಳನ್ನು ಸಾಧಿಸಿದ ರೀತಿಯನ್ನು ಈ ಮುಂದಿನಂತೆ ಅವುಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಿರುವುದು.

ಹೀಗೆ ಬಂದೊದಗಿದ ದುಸ್ಥಿತಿಯೊಂದರಲ್ಲಿಯೇ ನಮ್ಮ ಅಪ್ರಾಚೀನವಲ್ಲದ

ಮಾನವನು ತನ್ನ ಮುಂದಿನ ಪೀಳಿಗೆಯೊಂದಿಗೆ ಸಂಪರ್ಕ–ಸಂವಹನಗಳನ್ನು ಸಾಧಿಸುವ ಸಲುವಾಗಿಯೇ ಅವನು ಈ ಮುಂದೆ ಬರೆಹದ ಮಾಧ್ಯಮವನ್ನು ಶೋಧಿಸಿರುವ ಸಾಧ್ಯತೆಗಳು ಅಪಾರವಾಗಿವೆಯೆಂದು ಈ ಮೂಲಕವೇ ಅರಿಯಬಹುದಾಗಿದೆ. ಅಂತೆಯೇ ಅವನು ಈ ಬರೆವಣಿಗೆಯ ಮಾಧ್ಯಮವನ್ನು ಈ ಹಿನ್ನೆಲೆಯಲ್ಲಿಯೆ ರೂಢಿಸಿಕೊಂಡಿರಬೇಕು ಎಂದು ಈ ಸಂದರ್ಭದಲ್ಲಿ ಗ್ರಹಿಸಬೇಕಿರುವುದು ಮತ್ತು ಆ ಬಗೆಯಲ್ಲಿ ಮತ್ತಷ್ಟು ವಿಚಾರ ಮಾಡಬೇಕಿರುವುದು ಇದರ ಮುನ್ನೆಲೆಗೆ ಬರುವ ಹೆಚ್ಚಿನ ಅಂಶ.[7] ಹೀಗಾಗಿ ಈ ಹಿನ್ನೆಲೆಯಿಂದ ಸಾಮಾನ್ಯ ಭಾಷೆ ಮತ್ತು ಬರೆಹದ ನುಡಿಯ ಬಗೆಗೆ ಅರಿತುಕೊಳ್ಳಬೇಕಾದ ಹೆಚ್ಚಿನ ಸಂಗತಿಗಳೂ ಈ ಮುಂದಿವೆ. ಅವು ಇಂತಿವೆ.

1. ಭಾಷೆ ಬಳಸಿದವರ ಭಾಷೆ ಇರುವುದು ಮತ್ತು ಆ ಭಾಷೆ ಬಳಸಿದವರೂ ಇರುವುದು. ಆದರೆ ಆ ಭಾಷೆಯನ್ನು ಬಳಸುವವರು ಇದ್ದರೂ ಆ ಭಾಷೆಯನ್ನು ಬಳಸದೇ ಇರುವುದು.
2. ಭಾಷೆ ಬಳಸಿದವರ ಭಾಷೆ ಇರುವುದು ಆದರೆ ಆ ಭಾಷೆ ಬಳಸಿದವರು ಇಲ್ಲವಾಗುವುದು. ಅದರಂತೆ ಆ ಭಾಷೆಯನ್ನು ಬಳಸುವವರೂ ಇಲ್ಲವಾಗುವುದು.
3. ಭಾಷೆ ಬಳಸಿದವರ ಭಾಷೆ ಇದ್ದರೂ ಬಳಸಿದ ಭಾಷೆಯನ್ನು ಮುಂದಿನ ಪೀಳಿಗೆಗೆ ಬಳಸುವಂತೆ ತಲುಪಿಸದೆ ಇರುವುದು. ಅಂತೆಯೇ ಆ ಭಾಷೆಯು ಮುಂದಿನ ಪೀಳಿಗೆಗೆ ತಲುಪದೆ ಇರುವುದು.
4. ಹಾಗೆ ತಲುಪದೆ ಇರುವ ಕಾರಣ ಆ ಭಾಷೆಯನ್ನೇ ತಿಳಿಯದವರು ಪ್ರಸ್ತುತದಲ್ಲಿ ಇರುವುದು. ಆದರೆ ಆ ಭಾಷೆಯು ಮಾತ್ರ ನಾಮಮಾತ್ರ ಅವಶೇಷವಾಗಿ ಪ್ರಸ್ತುತದಲ್ಲಿ ಇದ್ದೇ ಇರುವುದು.

ಹೀಗಾಗಿ ಭಾಷೆಯನ್ನು ಬಳಸುತ್ತಿರುವವರೆ ಬಳಸುತ್ತಿದ್ದ ಪಕ್ಷದಲ್ಲಿ ಆ ಭಾಷೆಯ ಬೆಳೆವಣಿಗೆಯೂ ಆ ಸಮೂಹದಲ್ಲಿ ಅಸಾಧ್ಯ ಮಾತ್ರವಲ್ಲ ಅದನ್ನು ತಿಳಿವಳಿಕೆಯ ಭಾಗವಾಗಿ ವಿಸ್ತರಿಸುವ ಮಾತಂತಿರಲಿ ಅದನ್ನು ಮುಂದಿನ ಪೀಳಿಗೆಗೆ ತಲುಪಿಸುವ ಮಾತೂ ಅಲ್ಲಿಗೆ ದುಸ್ತರ ಸನ್ನಿವೇಶದ್ದೇ ಆಗಿ ಉಳಿಯುವುದು ಎಂದು ಹೇಳಬೇಕಾದ್ದು ಈ ನಿಟ್ಟಿನಲ್ಲಿಯೇ.

ಹಾಗಾಗಿ ಈ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಮೇಲ್ನೋಟಕ್ಕೆ ಭಾಷೆಯನ್ನು ಬಳಸುವುದಾದರೂ ಏತಕ್ಕೆ? ಎಂದು ಈ ಮೊದಲಿನಂತೆಯೇ ಮತ್ತೊಮ್ಮೆ ಕೇಳಿಕೊಂಡು ಮುನ್ನಡೆದಿದ್ದೇ ಆದಲ್ಲಿ ಅದಕ್ಕೆ ಉತ್ತರವೀಯುವ ರೂಪದಲ್ಲಿ ನಮ್ಮ ಅನುಕೂಲಕ್ಕೆ ಮತ್ತು ನಮ್ಮ ನಮ್ಮ ಉಪಯೋಗಕ್ಕೆ ಬರುತ್ತದೆಂಬ ಉದ್ದೇಶದಿಂದಲೂ ಕೂಡ ಭಾಷೆಯೆನ್ನುವುದು ಮನುಷ್ಯನಾದವನಿಗೆ ಅವನ ಜೀವಿತಾವಧಿಯಲ್ಲಿ ಅತ್ಯಮೂಲ್ಯವಾದುದೆಂದು ಹೇಳಲು ಆಗಿರುವುದು. ಆದರೆ ಅದನ್ನು ಇನ್ನೊಬ್ಬರಿಗೆ ಮತ್ತು ಮುಂದಿನ ಪೀಳಿಗೆಗೆ ಯಾಕೆ ತಲುಪಿಸಬೇಕು? ಎಂಬ ಪ್ರಶ್ನೆಯು ಈ

ಹಿನ್ನೆಲೆಯಲ್ಲಿ ಅಷ್ಟೇ ಬಲವತ್ತರವಾಗಿ ಇದ್ದೇ ಇರುವುದು.

ಹಾಗಿದ್ದಲ್ಲಿ ಇನ್ನೊಬ್ಬರಿಗೆ ಮತ್ತು ಮುಂದಿನ ಪೀಳಿಗೆಯವರೆಗೆ ಭಾಷೆಯನ್ನು ತಿಳಿಸಿಕೊಡುವುದು ಮತ್ತು ತಿಳಿಯುವಂತೆ ಮಾಡುವುದೆಂದರೆ ಏನು? ಇದಕ್ಕೆ ಉತ್ತರ ರೂಪಿಯಾಗಿ ಹೇಳುವುದಾದರೆ ಅದೊಂದು ರೂಪಿಸುವಿಕೆಯ ದಾಟಿಸುವಿಕೆಯ ಹಂತವೇ ಇದಾಗಿದೆ ಎನ್ನುವುದು ಇಲ್ಲಿ ಪ್ರಮುಖವಾಗಿ ತೋರಿಬರುವ ಒಂದಂಶ. ಹಾಗೆ ಅಂತಹ ರೂಪಣೆಯ ಬಗೆಯಿಂದಲೆ ಮತ್ತು ಆ ಪೂರ್ವದಲ್ಲಿ ತಾನು ಪಡೆದ ಬಗೆಯೂ ಇದಾಗಿದೆ ಎನ್ನುವುದು ಇದರ ಹಿನ್ನೆಲೆಯಲ್ಲಿ ಕಾಣಿಸಿಕೊಳ್ಳುವ ಮತ್ತೊಂದು ಸಂಗತಿಯೂ ಇಲ್ಲಿರುವುದು.

ಮುಂದುವರೆದು ಹೇಳುವುದಾದರೆ ಮನುಷ್ಯ ಜನಾಂಗವೊಂದರ ಶ್ರೇಯೋಭಿವೃದ್ಧಿಗೆ ಶ್ರಮಿಸುವಲ್ಲಿ ಈ ಪ್ರಕ್ರಿಯೆಯೊಂದಕ್ಕೆ ಅದರದ್ದೇ ಆದ ಸ್ಥಾನವೊಂದು ಇದ್ದೇ ಇದೆ ಎಂದು ಹೇಳುವುದು ಒಂದು. ಆ ಕಾರಣದಿಂದಲೇ ಒಂದು ಪೀಳಿಗೆಯನ್ನು ಇಲ್ಲಿ ಇನ್ನೊಂದು ಪೀಳಿಗೆಯು ಸ್ಮರಿಸುವಂತೆ ಮುಂದಿನ ಪೀಳಿಗೆಯೂ ಆ ಪೂರ್ವದ ಪೀಳಿಗೆಯನ್ನು ನೆನೆಯುವುದೂ ಕೂಡ. ಒಟ್ಟಂದದಲ್ಲಿ ಹಾಗೆ ಹಿಂದಿನ ಪೀಳಿಗೆಯೆನಿಸಿಕೊಂಡ ಆ ತಲೆಮಾರು ತನ್ನ ಮುಂದಿನ ತಲೆಮಾರಿನೊಂದಿಗೆ ವ್ಯವಹರಿಸಲೇಬೇಕಾದ ತುರ್ತೊಂದು ಇಲ್ಲಿ ಏರ್ಪಟ್ಟಿರುವುದು ಅಷ್ಟೇ ದಿಟ. ಆ ಸಲುವಾಗಿಯೂ ಈ ಎರಡು ಪೀಳಿಗೆಗಳಲ್ಲಿ ಅಂತಹದೊಂದು ಅನಿವಾರ್ಯವಾದ ಭಾಷೆಯ ಸಂವಹನವೊಂದು ಅರ್ಥಾತ್ ಸಂಪರ್ಕವೊಂದು ಇಲ್ಲಿ ಇದ್ದೇ ಇದೆ ಎನ್ನುವಲ್ಲಿ ಯಾವ ಅನುಮಾನವೂ ಇರದು.

**ಭಾಷೆಯ ಬಳಕೆ ಮತ್ತು ಭಾಷೆಯ ಸಾವು!**

ಈ ಹಿಂದೆಯೇ ಹೇಳಿದಂತೆ ಭಾಷೆಯ ಸಾವಿಗೆ ಮನುಷ್ಯನ ಸಾವಷ್ಟೇ ಕಾರಣವಲ್ಲವೆಂದು ಸಿದ್ಧಾಂತ ಮಾಡಿ ಹೇಳಿಯಾಯ್ತು. ಹಾಗೆ ಆ ಭಾಷೆಯನ್ನು ಬಳಸುವವರು ಕ್ರಮೇಣ ವೃದ್ಧಿಸದೆ ಇರುವ ಕಾರಣದಿಂದಲೂ ಆ ಭಾಷೆಯು ದಿನದಿಂದ ದಿನಕ್ಕೆ ಅಳಿಯುವುದನ್ನು ಇದಕ್ಕೆ ಪ್ರಮುಖ ಕಾರಣಗಳಲ್ಲಿ ಒಂದೆಂದು ತಿಳಿದು ಆ ಬಗೆಗೆ ಮತ್ತಷ್ಟು ವಿಚಾರ ಮಾಡುವುದು ಮತ್ತೊಂದು ನೆಲೆಯದ್ದು. ಹೀಗಾಗಿ ಆ ಭಾಷೆಯನ್ನಾಡುವ ಜನಾಂಗವನ್ನು ಆ ಭಾಷೆಯ ಮೂಲಕ ಜ್ಞಾನವಂತರನ್ನಾಗಿ ಮಾಡದ ಹೊರತಾಗಿಯೂ ಆ ಭಾಷೆಗೆ ಬಂದೊದಗುವ ಸಾವು ಕಟ್ಟಿಟ್ಟ ಬುತ್ತಿಯೇ ಸರಿ ಎಂದು ಹೇಳುವ ಬಗೆಯೂ ಇದರ ಇನ್ನೊಂದು ನೆಲೆಯಾಗಿರುವುದು.

ಹೀಗಾಗಿ ನುಡಿಗಳ ಅಳಿವು ಉಳಿವಿನ ಪ್ರಶ್ನೆ ಬಂದಿರುವುದೂ ಈ ದೃಷ್ಟಿಯಿಂದಲೇ ಎಂಬುದನ್ನಿಲ್ಲಿ ತಿಳಿಯಬೇಕಿರುವುದು. ಹೀಗಾಗಿ ಈ ಬಗೆಗೆ ಮತ್ತಷ್ಟು ವಿಚಾರ ಮಾಡಬೇಕಿರುವುದು ಆ ಕಾರಣದಿಂದಲೆ.

**ಮಾನವ ಜಗತ್ತಿನಲ್ಲಿ ಭಾಷೆ ಯಾಕೆ ಉಳಿಯಬೇಕು?**

ಹಿಂದಿನವರ ತಿಳಿವಳಿಕೆಯ ಕ್ರಮವನ್ನು ಇಂದಿನವರಿಗೆ ತಿಳಿಸುವಲ್ಲಿ ಮತ್ತು ಇಂದಿನವರ ತಿಳಿವಳಿಕೆಯ ವಿಧಾನವನ್ನು ಮುಂದಿನ ಪೀಳಿಗೆಗೆ ತಲುಪಿಸುವ ನಿಟ್ಟಿನಲ್ಲಿ ಭಾಷೆಯು ಉಳಿಯಬೇಕಿರುವುದು. ಅದರಂತೆಯೇ ಹಿಂದಿನವರ ತಿಳಿವಳಿಕೆಯನ್ನು ಇಂದಿನವರು ಪಡೆದು ಹೊಸದಾದ ಸುಧಾರಿತ ಕ್ರಮವೊಂದನ್ನು ಕಟ್ಟಲು ಭಾಷೆಯೆನ್ನುವುದು ಮನುಷ್ಯ ಜೀವನದ ಹಾದಿಯುದ್ದಕ್ಕೂ ಬಹುಮುಖ್ಯ ಪಾತ್ರವನ್ನು ವಹಿಸಿರುವುದು. ಹೀಗಾಗಿ ಮನುಷ್ಯನ ಜೀವನದಲ್ಲಿ ತನ್ನ ಬದುಕನ್ನು ಸುಧಾರಿತ ಕ್ರಮದಲ್ಲಿ ಕಟ್ಟಿ ಮುನ್ನಡೆಸಲು ಮತ್ತು ಮುಂದಿನ ಪೀಳಿಗೆಯೊಡನೆ ಹಿಂದಿನ ಪೀಳಿಗೆಯು ಸಂವಹನವನ್ನು ಸಾಧಿಸಲು ಮಾನವ ಜಗತ್ತಿನಲ್ಲಿ ಇಂದಿಗೆ ಭಾಷೆ ಅತ್ಯಗತ್ಯ ಮಾತ್ರವಲ್ಲ ಅಷ್ಟೇ ಅತ್ಯಮೂಲ್ಯವಾಗಿರುವುದೂ ಕೂಡ. ಹೀಗಾಗಿ ಭಾಷೆ ಅಳಿಯದೇ ಉಳಿಯಬೇಕಿರುವುದು.[8]

## ಕೊನೆ ಟಿಪ್ಪಣಿಗಳು:

1. ಒಂದು ಜೀವ ಮತ್ತೊಂದು ಅಜೀವ ವಸ್ತುವಿನೊಡನೆ ನಡೆಯುವ ಸಂವಹನದಲ್ಲೂ ಭಾಷೆ ಇದೆ ಎನ್ನುವುದೂ ಇದೆ. ಅಂದರೆ ಇಲ್ಲಿ ಜೀವ ಮತ್ತೊಂದು ಅಜೀವ ಎನ್ನುವಲ್ಲಿ ನಡೆಯುವ ಸಂವಹನವೂ ಕೂಡ ಭಾಷೆಯಿಂದ ಕೂಡಿದ್ದರೂ ಅದೊಂದು ನಿವೇದನಾ ರೂಪದಲ್ಲಿರುತ್ತದೆಂದು ಹೇಳಲಾಗುವುದು.
2. ಇದನ್ನು ಬಾಯ್ಮಾತಿನ ಭಾಷೆ ಇಲ್ಲವೆ ಆಡುನುಡಿ ಎಂತಲೂ ಕರೆಯಬಹುದು.
3. ಅಥವಾ ಇದನ್ನು ಬರೆಹದ ನುಡಿ ಎಂದೂ ಕರೆಯಬಹುದು.
4. ಅದು ಯಾಕೆ ಕಠಿಣ? ಎಂದು ಇಲ್ಲಿ ಹೇಳಬೇಕಿದೆಯೆಂದರೆ ಸಾಹಿತ್ಯದ ಭಾಷೆಗೆ ಇಂತಿಷ್ಟೆ ಗೆರೆ, ಮಿತಿಗಳು ಮತ್ತು ಸ್ಪಷ್ಟ, ನೇರವಾದ ಅರ್ಥಛಾಯೆಗಳು ಇಲ್ಲದ ಕಾರಣವಾಗಿ. 'ಸಾಹಿತ್ಯದ ಭಾಷೆ'ಗಿರಲಿ 'ಸಾಹಿತ್ಯ' ಎನ್ನುವುದಕ್ಕೆ ಮೊದಲು ಅದರ ಅರ್ಥಛಾಯೆಯೆನ್ನುವುದೆ ಇಲ್ಲವಾದರೂ ಅಧ್ಯಯನದ ಸಲುವಾಗಿ ಇದನ್ನು ಗ್ರಹಿಸುವ ಹಿನ್ನೆಲೆಯಿಂದ ಇಲ್ಲಿ ಕೊಂಚ ವಿಚಾರ ಮಾಡಬೇಕಿದೆಯಷ್ಟೆ.
5. ಅಂದರೆ ಒಂದು ದಿನ ಯಾವುದೋ ಕಾರಣಕ್ಕೆ ಪರಸ್ಪರ ಇಬ್ಬರಲ್ಲೂ ವಿರಸವುಂಟಾಗಿ ಕೊನೆಗೆ ಇಬ್ಬರೂ ದೂರವಾದ ಬಳಿಕ ಅವರಿಬ್ಬರಿಂದಲೂ ಸಂವಹನವಾಗುತ್ತಿದ್ದ ಆ ಭಾಷೆಯ ಸಂಪರ್ಕವೂ ಅಂದಿನಿಂದಲೆ ಆ ಇಬ್ಬರು ವ್ಯಕ್ತಿಗಳಿಂದ ದೂರವಾಯಿತು.
6. ಇಲ್ಲಿ ಮನದಟ್ಟಾಗಬೇಕಾದ ಇನ್ನೊಂದು ಸಂಗತಿಯೆಂದರೆ ಮನುಷ್ಯನು ಸತ್ತಮೇಲೆ ಭಾಷೆ ಸಾಯುತ್ತದೆನ್ನುವ ವಾದವನ್ನೇ ಇದು ನುಂಗಿಹಾಕಿಬಿಡುವುದರಿಂದ ಭಾಷೆಯ ಸಾವಿಗೆ ಮನುಷ್ಯನ ಸಾವು ಕಾರಣವಲ್ಲ! ಎಂಬುದನ್ನು ಇದು ಈ ಮುಖೇನವಾಗಿಯೇ ಎತ್ತಿಹಿಡಿಯುವುದು. ಹಾಗೆ ಬದುಕುಳಿದಿರುವ ಆ ಇಬ್ಬರು ವ್ಯಕ್ತಿಗಳು ಜೀವಂತವಾಗಿದ್ದರೂ ಅಲ್ಲಿಗೆ ಆ ಭಾಷೆಯು ಅವರಿಬ್ಬರ ನಡುವೆ ಸಂವಹನವಾಗದೆ ಒಂದರ್ಥದಲ್ಲಿ ಅಳಿದಿದೆಯಾದರೂ ಇನ್ನೊಂದರ್ಥದಲ್ಲಿ ಅವರಿಬ್ಬರಲ್ಲೂ ಆ ಭಾಷೆಯು ಅಂತರ್ಗತವಾಗಿ ಉಳಿದಿದೆಯಷ್ಟೆ.
7. ಹಾಗಾಗಿಯೇ ಇಲ್ಲಿ ಹೇಳಬೇಕಾಗಿ ಬಂದದ್ದು ಭಾಷೆಯನ್ನು ಬರೆವಣಿಗೆಗೆ ಒಗ್ಗಿಸಿಕೊಳ್ಳುವ ಕಾಲವೇ ಇದಾಗಿದೆ ಎಂದು.
8. ಮೊದಲು ಬರೆದಾಗ ಈ ಲೇಖನದ ಶೀರ್ಷಿಕೆಯು 'ಭಾಷೆಯ ಬಳಕೆ ಮತ್ತು ಭಾಷೆಯ ಸಾವು' ಎಂದಿತ್ತು. ಬಳಿಕ 'ಮಾನವ ಜಗತ್ತಿನಲ್ಲಿ ಭಾಷೆಯೊಂದರ ಹುಟ್ಟು ಮತ್ತು ಸಾವು' ಎಂದೂ ಆನಂತರದಲ್ಲಿ 'ಮಾನವ ಜಗತ್ತಿನಲ್ಲಿ ಭಾಷೆಗಳ ಅಳಿವು ಮತ್ತು ಉಳಿವು'ಎಂತಾಗಿತ್ತು. ಕ್ರಮೇಣವಾಗಿ ಪ್ರಸ್ತುತ ಈ ಮೇಲಿನ ಶೀರ್ಷಿಕೆಯನ್ನು ಪಡೆದಿದೆ.